**(ಇಂದು ದಿನಾಂಕ 26-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ  ಮುಖ್ಯವಿಚಾರಣೆಃ ಅರ್ಜಿದಾರರ  ಪರ ಶ್ರೀ ಎಚ್ ಎಚ್ ಸಿ    ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .  ನಾನು ಈ ಅರ್ಜಿಯಲ್ಲಿ   ಹಾಜರುಪಡಿಸಿರುವ   ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ .  ಸಾಕ್ಷಿಯ  ಗುರುತಿಸಿದ   ದಾಖಲೆಗಳನ್ನು  ಈ ಕೆಳಕಂಡಂತೆ  ಗುರುತಿಸಲಾಯಿತು .

| **ಕ್ರ.ಸಂ.** | **ದಾಖಲೆಗಳ  ನಮೂನೆ** | **ನಿಶಾನೆ** |
|---|---|---|
| 1 | ಗಾಯದ ಪ್ರಮಾಣ  ಪತ್ರದ ದೃಡೀಕೃತ ಪ್ರತಿ | ನಿಪಿ-32 |
| 2 | ಸರ್ಕಾರಿ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಮಂಗಳೂರುರವರು ನೀಡಿದ ಹೊರರೋಗಿಗಳ  ಗುರುತಿನ  ಚೀಟಿ | ನಿಪಿ-33 |
| 3 | 04 ಮೆಡಿಕಲ್  ಬಿಲ್ಲುಗಳು | ನಿಪಿ-34 |
| 4 | ಹಿಂಡಲ್ಯಾಬ್ಸ್ ಇವರು  ನೀಡಿದ ಎನ್ ಇ  ಸಿ ಟಿ ಬ್ರೇನ್  ವರದಿ | ನಿಪಿ-35 |
| 5 | 02 ಔಷಧಿ ಚೀಟಿಗಳು | ನಿಪಿ-36 |

**ಪಾಟೀಸವಾಲುಃ  1 ನೇ  ಎದುರುದಾರರ   ಪರ ಶ್ರೀ  ಬಿ ಕೆ ಎಸ್   ವಕೀಲರಿಂದ**

**1 ನೇ  ಎದುರುದಾರರ    ಮತ್ತು  ಅವರ ಪರ ವಕೀಲರನ್ನು ಕೂಗಿಸಲಾಯಿತು . ಗೈರು ಹಾಜರು ಇದ್ದಾರೆ , ಕೊರಿಕೆ ಇಲ್ಲ , ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು .**

**ಪಾಟೀಸವಾಲುಃ  2 ನೇ  ಎದುರುದಾರರ   ಪರ ಶ್ರೀ ಎಸ್ ಎನ್ ಬಿ     ವಕೀಲರಿಂದ**

ನಾನು ಈ ದಿನ ಧಾರವಾಡದ ಶಾಸ್ತ್ರೀ ಚಾಳದಿಂದ ಬಂದಿದ್ದೇನೆ . ಅಪಘಾತವಾದ ಸ್ಥಳ ಅದು ಘಾಟ ಸೆಕ್ಷನ್  ನಲ್ಲಿದೆ ಎಂದರೆ ಸರಿ. ಸಾಮಾನ್ಯವಾಗಿ  ತಿರುವಿನಲ್ಲಿ  ವಾಹನಗಳು  ವೇಗವಾಗಿ ಚಲಿಸುವುದಿಲ್ಲ ಎಂದರೆ ಸರಿಯಲ್ಲ . ನಾವು  ಸವಾರಿ ಮಾಡುತ್ತಿದ್ದ ಪಲ್ಸರ ಮೋಟರ ಸೈಕಲನ್ನು ನನ್ನ ಮಗ  ಚಲಾಯಿಸುತ್ತಿದ್ದ . ನನ್ನ ಮಗನಿಗೆ  ಮೋಟರ  ಸೈಕಲ್  ಚಲಾಯಿಸಲು ಪರವಾನಿಗೆ ಇದೆ

. ಸದರಿ ಪರವಾನಿಗೆಯನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ . ಸದರಿ ಅಪಘಾತದಲ್ಲಿ ಮತ್ತೊಂದು ಮೋಟರ ಸೈಕಲ ಭಾಗಿಯಾಗಿದೆ ಎಂದರೆ ಸರಿ . ಅಪಘಾತದ ಸಮಯದಲ್ಲಿ ನನ್ನ ಹಾಗೂ ನನ್ನ ವಾಹನದ ಮುಂದೆ ಬರುತ್ತಿದ್ದ ಮೋಟರ ಸೈಕಲ್ ಸವಾರ ಅತೀ ವೇಗವಾಗಿ ಚಲಾಯಿಸುತ್ತಿದ್ದ ಕಾರಣ ಎರಡೂ ಮೋಟರ ಸೈಕಲ್ ಗಳ ನಡುವೆ ನನ್ನ ಮಗನ ತಪ್ಪಿನಿಂದಲೇ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ . ಅಪಘಾತದ ಸಮಯದಲ್ಲಿ ನಾನು ಸವಾರಿ ಮಾಡುತ್ತಿದ್ದ ಮೋಟರ ಸೈಕಲ್ ಮತ್ತು ನಮ್ಮ ಮುಂದೆ ಹೋಗುತ್ತಿದ್ದ ಮೋಟರ ಸೈಕಲ್ ನಡುವೆ ಅಪಘಾತವಾಯಿತು ಎಂದರೆ ಸರಿಯಲ್ಲ . ನಾನು ಸವಾರಿ ಮಾಡುತ್ತಿದ್ದ ಮೋಟರ ಸೈಕಲ್ ಮತ್ತು ನಮ್ಮ ಮುಂದೆ ಹೋಗುತ್ತಿದ್ದ ಮೋಟರ ಸೈಕಲ್ ನಮ್ಮ ಎದುರಿನಿಂದ ಬರುತ್ತಿದ್ದ ಪಿಕ್ ಅಪ್ ವಾಹನಕ್ಕೆ ಡಿಕ್ಕಿಪಡಿಸಿವೆ ಎಂದರೆ ಸರಿಯಲ್ಲ . ಈ ಅಪಘಾತವನ್ನು ತಪ್ಪಿಸಲು ಪಿಕ್ ಅಪ್ ವಾಹನ ಚಾಲಕ ತುಂಬಾ ಪ್ರಯತ್ನ ಮಾಡಿದ್ದಾನೆ ಎಂದರೆ ಸರಿಯಲ್ಲ . ಆದ್ದರಿಂದ ಅಪಘಾತವು ಪಿಕ್ ಅಪ್ ವಾಹನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ .

ಅಪಘಾತದ ನಂತರ ಮೊದಲು ಶಿರಾಳಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಮಂಗಳೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು . ನಂತರ ಮಂಗಳೂರು ವೇನ್ ಲಾಕ್ ಆಸ್ಪತ್ರೆಗೆ ಅದೇ ದಿನ ಹೋದೆನು . ವೇನ್‌ಲಾಕ್ ಆಸ್ಪತ್ರೆಯಲ್ಲಿ ನಾನು ಒಂದು ತಿಂಗಳ ಕಾಲ ಒಳರೋಗಿಯಾಗಿದ್ದೆ . ನಾನು ವೇನ್‌ಲಾಕ್ ಆಸ್ಪತ್ರೆಯಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದಿದ್ದೆನೆ ಎಂದು ತೊರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ವೇನ್‌ಲಾಕ್ ಆಸ್ಪತ್ರೆಯಲ್ಲಿಯಿಂದ ಬಿಡುಗಡೆ ಹೊಂದಿದ ನಂತರ ನಾನು ಬೇರೆ ಕಡೆ ಚಿಕಿತ್ಸೆ ಪಡೆದಿಲ್ಲ .

ನನಗೆ ಆಗಿರುವ ಗಾಯಗಳಿಂದ ಸಂಪೂರ್ಣವಾಗಿ ಗುಣಮುಖವಾಗಿದ್ದೆನೆ ಎಂದರೆ ಸರಿಯಲ್ಲ . ನಾನು ನನ್ನ ದಿನನಿತ್ಯದ ಕೆಲಸಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳುತ್ತಿದ್ದೆನೆ ಎಂದರೆ ಸರಿ . ಅಪಘಾತದ ಮೊದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ದಾಖಲೆಗಳು ಮತ್ತು ಮೆಡಿಕಲ್ ಬಿಲ್ಲುಗಳು ಸೃಷ್ಟಿ

ಮಾಡಿತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . ನಾನು ನನ್ನ ಉದ್ಯೋಗ , ವರಮಾನ ಹಾಗೂ ವಯಸ್ಸಿನ ಕುರಿತಾದ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಅಪಘಾತದ ಸಮಯದಲ್ಲಿ ತನ್ನ ವಯಸ್ಸನ್ನು 61 ಎಂದು, ಉದ್ಯೋಗ , ವರಮಾನ ಪ್ರತಿ ತಿಂಗಳು ರೂ. 20,000/- ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವೈದ್ಯಕೀಯ ವೆಚ್ಚಕ್ಕಾಗಿ ರೂ . 3 ಲಕ್ಷ ರೂಪಾಯಿ ಹಣ ಖರ್ಚು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಪರಿಣಾಮ ಉಂಟಾದ ಗಾಯಗಳಿಂದ ನನಗೆ ಶಾಶ್ವತ ಅಂಗನ್ಯೂನ್ಯತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರುಪಡಿಸಿರುವ ದಾಖಲೆಗಳನ್ನು ನನ್ನ ಅರ್ಜಿಗೆ ಪೂರಕವಾಗಿ ಅನುಕೂಲವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ . ಪಿಕ್ ಅಪ್ ವಾಹನ ಚಾಲಕನು ಅಧಿಕೃತವಾಗಿ ಚಾಲನಾ ಪರವಾನಿಗೆ ಹೊಂದದ ಕಾರಣ ನಾನು ಕೇಳಿರುವಂತೆ ಪರಿಹಾರ ಪಾವತಿಸುವ ಹೊಣೆ 2 ನೇ ಎದುರುದಾರನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ . ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.